

# ವ್ಯಕ್ತದಿಂದ ಅವ್ಯಕ್ತವನ್ನು ಮೀಟುವ ಯತ್ನ

ಮಿತಿಯಾಗಬಲ್ಲ ದೃಶ್ಯಿಕೆಗಳನ್ನೇ ಜೀಕುಗೋಲಾಗಿಸಿಕೊಂಡು ಅವ್ಯಕ್ತವನ್ನು ಮುಟ್ಟುವ ಸಮರ್ಥ ಪ್ರಯತ್ನವಾಗಿ ಈ ಕಿರುಚಿತ್ರ ಗಮನಸೆಳೆಯುತ್ತದೆ.

■ ಗೌರಿ



**ಹೆಸರು:** ಟಿಯೆರಾ ವೈ ಪಾನ್ (ಮೆಕ್ಸಿಕೊ)
**ನಿರ್ದೇಶನ:** ಕಾರ್ಲೋಸ್ ಅರ್ಮೆಲ್ಲಾ
**ತಾರಾಗಣ:** ಲಿಸ್ಸೆಟ್ ಗಾರ್ಸಿಯಾ, ಪ್ಯಾಟ್ರಿಷಿಯಾ ಮೆನೆಸ್ಸೆಸ್, ಅಲ್ಬರ್ಟೋ ಟ್ರುಜಿಲ್ಲೊ, ಅಡೊಲ್ಫೋ ಸೇಬಾಲೋಸ್
**ಸಂಗೀತ:** ಗೆರಾರ್ಡೊ ಫರ್ನಾಂಡೀಸ್
**ಛಾಯಾಗ್ರಹಣ:** ಇಸಿ ಸರ್ಫಾಟಿ
**ಧ್ವನಿ:** ಕಾರ್ಲೋಸ್ ಜಮೊರಾನೊ

ಕಥೆಯನ್ನು ಹೇಳುವುದಕ್ಕೆ ಹಲವು ಮಾಧ್ಯಮಗಳಿವೆ. ಸಿನಿಮಾವೂ ಅವುಗಳಲ್ಲಿ ಒಂದು. ಆದರೆ ಸಿನಿಮಾದಲ್ಲಿ ಕಥೆ ಹೇಳುವುದರ ಜೊತೆಗೆ ಕಾಣಿಸುತ್ತಲೂ ಇರುತ್ತೇವೆ. ದೃಶ್ಯ ಮತ್ತು ಶ್ರವ್ಯ ಎನ್ನುವುದು ಅದರ ಶಕ್ತಿಯೂ ಹೌದು; ಮಿತಿಯೂ ಹೌದು. ಯಾಕೆಂದರೆ ಕಣ್ಣೆದುರು ಕಾಣಿಸುತ್ತ ಕಿವಿಗೆ ಕೇಳಿಸುತ್ತಿರುವುದರ ಕುರಿತು ನಾವು ಕಲ್ಪಿಸಿಕೊಳ್ಳಲು ಹೆಚ್ಚೇನೂ ಇರುವುದಿಲ್ಲ. ಈ ನಿಟ್ಟಿನಲ್ಲಿ ದೃಶ್ಯ ಮಾಧ್ಯಮ ಎನ್ನುವುದು ಕಲ್ಪನೆಗೆ ಹಾಕಿದ ಬೇಲಿಯಂತೆ ತೋರುತ್ತದೆ. ಆದರೆ ಆ ಬೇಲಿಯನ್ನೇ ಜೀಕುಗೋಲಾಗಿಸಿಕೊಂಡು ಅವ್ಯಕ್ತದ ಒಡಲೊಳಗೆ ಜಿಗಿಯುವ ಸಾಧ್ಯತೆಯನ್ನೂ ಸಿನಿಮಾ ತನ್ನೊಳಗೆ ಇರಿಸಿಕೊಂಡಿದೆ. ಇಲ್ಲಿ ಕಥೆಯನ್ನು ಹೇಳುವುದರಷ್ಟೇ ಅದನ್ನು ಹೇಗೆ ಹೇಳುತ್ತಿದ್ದೇವೆ ಎನ್ನುವ ಕ್ರಮ ಮತ್ತು ಅದು ನೋಡುಗನ ಮನಸಲ್ಲಿ ಉಂಟುಮಾಡುವ ಪರಿಣಾಮಕ್ಕಾಗಿ ಬಳಸಿಕೊಂಡ ಸಲಕರಣೆಗಳೂ ಅಷ್ಟೇ ಮುಖ್ಯ. ಹಾಗಾಗಿಯೇ ಇಂದಿಗೂ ಅದು ಬಹುಜನರ ನೆಚ್ಚಿನ ಜನಪ್ರಿಯ ಮಾಧ್ಯಮವಾಗಿರುವುದರ ಜೊತೆಗೇ ತೀವ್ರ ಸೃಜನಶೀಲ ಶೋಧಕರ ದಾರಿಯೂ ಆಗಿ ಉಳಿದಿದೆ.

'ಟಿಯೆರಾ ವೈ ಪಾನ್' (ಲ್ಯಾಂಡ್ ಆ್ಯಂಡ್ ಬ್ರೆಡ್) ಕಿರುಚಿತ್ರ ಮಿತಿಯಾಗಬಲ್ಲ ದೃಶ್ಯಿಕೆಗಳನ್ನೇ ಜೀಕುಗೋಲಾಗಿಸಿಕೊಂಡು ಅವ್ಯಕ್ತವನ್ನು ಮುಟ್ಟುವ ಸಮರ್ಥ ಪ್ರಯತ್ನವಾಗಿ ಗಮನಸೆಳೆಯುತ್ತದೆ. ಇಲ್ಲಿ ಹೇಳಿರುವುದಕ್ಕಿಂತ ಹೇಳದಿರುವುದೇ ಹೆಚ್ಚು ಕಾಡುವುದು, ಕಾಣುವುದಕ್ಕಿಂತ ಕಾಣದಿರುವುದೇ ಹೆಚ್ಚು ರಿಂಗಣಿಸುವುದು. ಕಾಣುವುದೆಲ್ಲವೂ ಕಾಣದಿರುವ ಯಾವುದನ್ನೋ ಉದ್ದೀಪಿಸುವ ಸಾಧನವಾಗಿಯೇ ಬಳಕೆಯಾಗುತ್ತಿರುವಂತೆ ಭಾಸವಾಗುತ್ತದೆ.

ಒಂದು ಮೈದಾನ. ಒಂದೇ ಒಂದು ಹಸಿರು ಹುಲ್ಲಿನ ಕುರುಹೂ ಇಲ್ಲದ ಬರಡು ಮೈದಾನ. ಅಲ್ಲಿ ಒಂದು ಗೂಟಕ್ಕೆ ನಾಯಿಯನ್ನು ಕಟ್ಟಿಹಾಕಲಾಗಿದೆ. ಅದು ಸರಪಳಿಯಿಂದ ತಪ್ಪಿಸಿಕೊಳ್ಳುವ ಶತಪ್ರಯತ್ನ ಮಾಡುತ್ತ ಜಗ್ಗಾಡುತ್ತ ಬೊಗಳುತ್ತಿದೆ. ಈ ಸನ್ನಿವೇಶದೊಂದಿಗೇ ಕಿರುಚಿತ್ರ ಆರಂಭವಾಗುತ್ತದೆ. ಕ್ಯಾಮೆರಾ ತಿಳಿದೂ ತಿಳಿಯದ ಹಾಗೆ ತನ್ನ ಕಣ್ಣುಗಳನ್ನು ಹಿಗ್ಗಿಸಿಕೊಂಡು ದೃಶ್ಯವನ್ನು ವಿಸ್ತರಿಸುತ್ತ ಹೋಗುತ್ತದೆ. ಒಬ್ಬಳು ಕೆಂಪು ಉಡುಗೆ ತೊಟ್ಟ ಹುಡುಗಿ ಬಂದು ಆ ನಾಯಿಯ ಜೊತೆ ಆಟವಾಡಿಕೊಂಡು ಹೋಗುತ್ತಾಳೆ. ದೃಶ್ಯ ವಿಸ್ತಾರವಾದಂತೆಲ್ಲ ಆ ನಾಯಿಯ ಪಕ್ಕದಲ್ಲಿ ಒಂದು ವಸ್ತ್ರ ಒಣಗಿಸುವ ತಂತಿ ಇರುವುದು, ಅದರ ಪಕ್ಕ ಒಂದು ಜೋಪಡಿಯಂತಹ ಮನೆ ಇರುವುದೆಲ್ಲ ಕಾಣಿಸುತ್ತದೆ.

ಒಬ್ಬಳು ತುಂಬು ಗರ್ಭಿಣಿ ಹೆಣ್ಣು ಬಯಲಿನ ಇನ್ನೊಂದು ಬದಿಯಿಂದ ಬಂದು ನೋವಿನಿಂದ ಕಿರುಚುತ್ತ ಮನೆಯೊಳಗೆ ಹೊಗುತ್ತಾಳೆ. ಮರುಕ್ಷಣದಲ್ಲಿಯೇ ಮೊದಲಿಗೆ ಬಂದಿದ್ದ ಪುಟ್ಟ ಹುಡುಗಿ ಓಡಿಕೊಂಡು ಹೊರಗೆ ಹೋಗಿ ಒಬ್ಬ ಗಂಡಸನ್ನೂ, ವೃದ್ಧ ವೈದ್ಯರನ್ನು ಕರೆತರುತ್ತಾಳೆ. ತುಸು ಹೊತ್ತಿನಮೇಲೆ ವೃದ್ಧ ವೈದ್ಯ ರಕ್ತಸಿಕ್ತ ಬಟ್ಟೆಯೊಂದಿಗೆ ಹೊರಗೆ ಬಂದು ವಾಹನದಲ್ಲಿ ಕೂತು ಹೊರಟು ಹೋಗುತ್ತಾನೆ. ಗಂಡಸು ಬಂದು ನಾಯಿಯ ಕತ್ತು ಬಿಚ್ಚುತ್ತಾನೆ. ಮತ್ತೆ ಒಳಗೆ ಹೋಗಿ ಸಣ್ಣ ಮಗುವಿನ ಮೃತದೇಹವನ್ನು ತಂದು ಮನೆಯಿಂದ ಕೊಂಚ ದೂರ ಹೂಳುತ್ತಾನೆ.

ಈ ಎಲ್ಲವೂ ಚಿತ್ರಿತವಾಗಿರುವುದು ಒಂದೇ ಶಾಟ್‌ನಲ್ಲಿ. ಅದೂ ನಿಧಾನವಾಗಿ ಕ್ಯಾಮೆರಾ ಝೂಮ್‌ಔಟ್ ಆಗುತ್ತಲೇ ಇರುತ್ತದೆ. ಅಂದರೆ ಪಾತ್ರಗಳು, ಪರಿಸರ ಮತ್ತು ಪ್ರೇಕ್ಷಕನ ನಡುವಿನ ಅಂತರ ಹೆಚ್ಚುತ್ತಾ ಅಸ್ಪಷ್ಟವಾಗುತ್ತಲೇ ಹೋಗುತ್ತದೆ. ಈ ಡಿಸ್ಟೆನ್ಸ್ ಪ್ರೇಕ್ಷಕನ ಮನಸಲ್ಲಿ ಹುಟ್ಟಿಸುವ ಭಾವ ಮಾತ್ರ ಗಾಢವಾದದ್ದು. ಇಂಥದ್ದೇ ಜಾಗ, ಇಂಥದ್ದೇ ಭಾಷೆ, ಇಂಥದ್ದೇ ಬಗೆಯ ಮನುಷ್ಯರು ಎಂದು ಹೇಳಲಿಕ್ಕೇ ಸಾಧ್ಯವಾಗದ ರೀತಿಯಲ್ಲಿ ಈ ಕಥನಕ್ಕೊಂದು ಸಾರ್ವತ್ರಿಕ ಕ್ಯಾನ್ವಾಸ್ ಸಿಕ್ಕಿಬಿಡುತ್ತದೆ.

ಕೊನೆಯಲ್ಲಿ ಮಗುವನ್ನು ಹುಗಿದ ಜಾಗದಲ್ಲಿ ನಾಯಿ ಮೂಸಿ ಮೂಸಿ ನೋಡುತ್ತ, ಕೆದಕುವಂತೆ ಮಾಡುತ್ತಿರುವ ದೃಶ್ಯದೊಂದಿಗೆ ಸಿನಿಮಾ ಮುಗಿಯುತ್ತದೆ. ಮತ್ತೊಂದು ಬದಿಯಲ್ಲಿ ಯಾವುದೋ ಪ್ರಾಣಿಯ ಅಸ್ಥಿಪಂಜರ ಬಿದ್ದಿರುವುದೂ ಕಾಣಿಸುತ್ತದೆ. ಹಿನ್ನೆಲೆಯಲ್ಲಿ ನಾಯಿ ಮೂಳೆಯನ್ನು ಕಡಿಯುವ ಸದ್ದೂ ಕೇಳಿಸುತ್ತದೆ. ಬಡತನ, ಹುಟ್ಟು–ಸಾವು, ಎಂಥ ಸಂಕಷ್ಟದಲ್ಲಿಯೂ ಮುಗಿಯದ ಮನುಷ್ಯನ ಜೀವನಪ್ರೀತಿ ಎಲ್ಲವನ್ನೂ ಒಂದು ರೀತಿ ಕಲಸುಮೇಲೊಗರದ ಕಳವಳದಲ್ಲಿ ರಿಂಗಣಿಸುವ ಶಕ್ತಿಯನ್ನು ಈ ಕಿರುಚಿತ್ರ ಹೊಂದಿದೆ.

ಈ ಕಿರುಚಿತ್ರ ವೀಕ್ಷಣೆಗೆ **bit.ly/2YrZzEF** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.